

ತಮ್ಮದಾಗಬಹುದಲ್ಲ ಎಂಬ ಆಸೆಯಲ್ಲಿ ವೇದಿಕೆಯ ಮೇಲಿನ ಪ್ರಶ್ನೋತ್ತರದಲ್ಲಿ ಮಗ್ನರಾದರು. ವೇದಿಕೆಯ ಮೇಲೆ ತಾವು ಹೇಗೆ ವರ್ತಿಸಬೇಕೆಂಬುದನ್ನು ಮನದಲ್ಲಿಯೇ ಅಭ್ಯಾಸ ಮಾಡತೊಡಗಿದರು.

ಸ್ಪರ್ಧಿಗಳಿಗೆ ನಟ ನಟಿಯರು ಈ ಲೋಕದ ಮನುಷ್ಯರಂತೆಯೇ ಕಾಣುತ್ತಿರಲಿಲ್ಲ. ಅವರೆಂದೂ ಕಷ್ಟವನ್ನು ಕಂಡು ಕೇಳರಿಯದವರಂತೆ ನಗುನಗುತ್ತಿದ್ದರು. ಬದುಕಿನ ಎಲ್ಲಾ ಸಂಕಷ್ಟಗಳಿಗೂ ಅವರ ಬಳಿ ಉತ್ತರವಿದೆಯೆನಿಸುತ್ತಿತ್ತು. ಆದರೆ, ಘಮಘಮಿಸುತ್ತಿದ್ದ ಅವರ ದೇಹದೊಳಗೆ ಅನೇಕ ರೋಗಗಳು ಬೀಡು ಬಿಟ್ಟಿದ್ದವು. ದೇಹವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಸಿಕ್ಸ್ ಪ್ಯಾಕ್‌ಗೋಸ್ಕರ ನಟ ಮತ್ತು 36, 24, 36 ದೇಹಾಕೃತಿಗೆ ನಟಿ ಮಾಡುತ್ತಿದ್ದ ಕಸರತ್ತು ಮತ್ತು ಅಸಹಜ ಜೀವನಶೈಲಿಯೇ ಅವರ ರೋಗದ ಮೂಲವಾಗಿತ್ತು. ಅವರ ನಡೆನುಡಿ, ಸ್ನೇಹ ಸಂಬಂಧಗಳೆಲ್ಲ ಕೃತಕವಾಗಿಯೂ, ಟೊಳ್ಳಾಗಿಯೂ ಇದ್ದು ಆಂತರ್ಯದಲ್ಲಿ ಖಿನ್ನತೆಯಿಂದ ನರಳುತ್ತಿದ್ದರು. ಸಾಮಾಜಿಕ ಸ್ಥಾನಮಾನ ಕಾಪಾಡಿಕೊಳ್ಳಲು ನಿಜವನ್ನು ಮುಚ್ಚುಮರೆ ಮಾಡುತ್ತ ಇನ್ನಷ್ಟು ರೋಗಗ್ರಸ್ಥರಾಗಿದ್ದರು. ನಟನ ವೈವಾಹಿಕ ಜೀವನವು ಶ್ರೀಮಂತಿಕೆ, ವೃತ್ತಿ ಸಂಬಂಧಿ ಆಕರ್ಷಣೆ, ಗಾಳಿಮಾತು, ಮತ್ಸರ ಮುಂತಾದವುಗಳನ್ನು ನಿಭಾಯಿಸಲಾಗದೆ ಹೆಂಡತಿಯ ಮುಖ ನೋಡದಂತಾಗಿದ್ದ. ಇದ್ದ ಇಬ್ಬರು ಮಕ್ಕಳು ವಸತಿಶಾಲೆಗಳ ಪಾಲಾಗಿದ್ದರು. ನಟಿಯ ಜೀವನವು ಪ್ರೀತಿಸಿದಂತೆ ಮಾಡಿ ಕೈಕೊಟ್ಟು ಹೋದ ಬಣ್ಣದ ಲೋಕದ ಹಲವು ನಟರಿಂದ ತುಂಬಿಹೋಗಿತ್ತು. ಅವಳು ಕನಿಷ್ಠ ಮೂರು ಬಾರಿ ಆತ್ಮಹತ್ಯೆ ಪ್ರಯತ್ನಗಳಿಂದ ಸ್ವಲ್ಪದರಲ್ಲಿ ಬಚಾವಾಗಿದ್ದಳು.

ಮೊದಲ ಸ್ಪರ್ಧಿಗೆ ಪ್ರಶ್ನೆಗಳು ಶುರುವಾದವು. ಬಿಸಿಯೇರಿದ ಕುರ್ಚಿಯಲ್ಲಿ ಪತಿ ನಂಬರ್ 1 ನ್ನು ನಟ ನಟಿಯರೇ ಕೈ ಹಿಡಿದು ಕರೆತಂದು ಎತ್ತರದ ಕುರ್ಚಿಯಲ್ಲಿ ಕೂರಿಸಿದರು. ಇಡೀ ಲೋಕವೇ ತನ್ನನ್ನು ಗಮನಿಸುತ್ತಿದೆ ಎಂದು ಭ್ರಮೆಯಾವರಿಸಿರಲು ಪ್ರಶ್ನೆಗಳು ಪ್ರಾರಂಭವಾದವು.

ನಟ: ನೀವು ಸರ್ಕಾರಿ ಕೆಲಸದಲ್ಲಿದ್ದೀರಿ. ದಿನವೂ ಎಷ್ಟು ಗಂಟೆಗೆ ಮನೆಗೆ ವಾಪಸ್ಸು ಬರುತ್ತೀರಿ?

ಪತಿ ನಂಬರ್ 1: ಸಾರ್ ಇಷ್ಟು ಹತ್ತಿರದಿಂದ ನಿಮ್ಮ ಎದುರಾಬದುರು ಕುಳಿತು ಮಾತನಾಡುತ್ತಿರುವುದು ನನ್ನ ಪೂರ್ವಜನ್ಮದ ಪುಣ್ಯ.

ನಟ : ಯಾಕ್ರಿ ಈ ಜನ್ಮದಲ್ಲಿ ನೀವು ಯಾವ ಪುಣ್ಯದ ಕೆಲಸವನ್ನೂ ಮಾಡಿಲ್ಲವೇ?

ಪತಿ ನಂಬರ್ 1: ಅಯ್ಯಯ್ಯೋ! ಹಾಗಲ್ಲ ಸರ್. ನಾನು ನಿಮ್ಮ ಅಭಿಮಾನಿ, ಭಕ್ತ ಸರ್. ನಿಮ್ಮ ನಟನೆಯ 'ನಿಯತ್ತಿನ ಗಂಡ' ಸಿನಿಮಾದಲ್ಲಿ ಸತ್ತು ಹೋದ ಹೆಂಡತಿಯ ಪ್ರಾಣವನ್ನು ಯಮರಾಯನ ಬೆನ್ನತ್ತಿ ಹಿಂಪಡೆಯುವ ನಿಮ್ಮ ಅಮೋಘ ನಟನೆಯನ್ನು ನೋಡಿ ನಾನು ವಿಪರೀತ ಅತ್ತಿದ್ದೆ ಸರ್. ಎಷ್ಟು ಅತ್ತಿದ್ದೆ ಅಂದ್ರೆ ಡಿಹೈಡ್ರೇಷನ್ ಆಗಿ ಆಸ್ಪತ್ರೆಗೆ ಸೇರಿಸಿದ್ದರು. ನಾನೂ ನನ್ನ ಹೆಂಡತಿಯನ್ನು ಅಷ್ಟೇ

